# ಹಗುರಾಗುವ ಹಂಬಲ

ಕರ್ನಾಟಕದ ಮಲೆನಾಡು ಅಥವಾ ಕರಾವಳೀ ಪ್ರದೇಶದಲ್ಲಿದ್ದ ಹಿರಿಯ ಪೀಳಿಗೆಯವರಿಗೆ 'ಹೊರೆಗಂಬ' ಎಂಬ ಪದ ಅಪರಿಚಿತವಲ್ಲ. ಹೊರೆಗಂಬ ಇಲ್ಲವೆ ಹೊರೆಗಲ್ಲು ಎಂಬುದು ಮನುಷ್ಯರು ಹೊತ್ತುಸಾಗಿಸುವ ಹೊರೆಗಳನ್ನು ತಾತ್ಕಾಲಿಕವಾಗಿ ಇಳಿಸಿಕೊಳ್ಳಲು ಮಾಡಲಾಗಿರುವ ಒಂದು ವ್ಯವಸ್ಥೆ. ಭೂಮಿಗೆ ಲಂಬವಾಗಿ ನೆಡಲಾಗಿರುವ ನಾಲ್ಕೈದು ಅಡಿಗಳಷ್ಟು ಎತ್ತರದ ಕಲ್ಲು ಕಂಬಗಳೇ ಈ ಹೊರೆಗಂಬಗಳು. ಕೆಲವು ಕಡೆ ಸ್ವಲ್ಪ ಅಂತರದಲ್ಲಿ ಎರಡು ಕಂಬಗಳನ್ನು ನೆಟ್ಟು, ಅವುಗಳ ಮೇಲೆ ಇನ್ನೊಂದು ಕಲ್ಲುಕಂಬವನ್ನು ತೊಲೆಯಂತೆ ಹಾಕಿರುವುದೂ ಉಂಟು. ಉರುವಲಿಗಾಗಿ ಕಟ್ಟಿಗೆಯನ್ನೋ, ಇನ್ನಿತರ ಭಾರದ ವಸ್ತುಗಳನ್ನೋ ತಲೆಯಮೇಲೆ ಹೊತ್ತು ಸಾಗಿಸಬೇಕಾಗಿದ್ದ ಕಾಲದಲ್ಲಿ, ಇಂಥ ಕಂಬಗಳು ಶ್ರಮಿಕರ ಪಾಲಿಗೆ ಮರುಭೂಮಿಯಲ್ಲಿನ ಓಯಸಿಸ್‌ನಂತೆ ಕಾಣಿಸುತ್ತಿದ್ದವು. ಹೊರೆ ಹೊತ್ತವರು ತಮ್ಮ ಹೊರೆಗಳನ್ನು ಈ ಕಲ್ಲುಗಳಿಗೆ ವರ್ಗಾಯಿಸಿ, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಮತ್ತೆ ತಮ್ಮ ಕಾಯಕ ಮುಂದುವರೆಸುತ್ತಿದ್ದರು. ಹಸು, ಎಮ್ಮೆ, ಕುರಿ ಮುಂತಾದ ಪ್ರಾಣಿಗಳೂ ತಮ್ಮ ಮೈಯ ನವೆಯನ್ನು ತೀರಿಸಿಕೊಳ್ಳಲು ಈ ಕಂಬಗಳನ್ನು ಉಪಯೋಗಿಸಿಕೊಳ್ಳುತ್ತಿದ್ದವು. ಹಿಂದಿನ ಕಾಲದಲ್ಲಿ ಕೆರೆ ಬಾವಿಗಳನ್ನು ತೋಡಿಸುವ, ಸಾಲು ಮರಗಳನ್ನು ನಡೆಸುವ ಲೋಕಹಿತ ಕಾರ್ಯಗಳ ಪಟ್ಟಿಯಲ್ಲಿ ಹೊರೆಗಂಬಗಳನ್ನು ನೆಡುವ ಕ್ರಿಯೆಗೂ ಸ್ಥಾನವಿತ್ತು.

ಅತ್ಯಂತ ಸರಳವೆನ್ನಿಸುವ ಈ ವ್ಯವಸ್ಥೆ ಮನುಷ್ಯ ಲೋಕದಲ್ಲಿನ ಒಂದು ನಿತ್ಯ ಸತ್ಯವನ್ನು ಧ್ವನಿಸುತ್ತದೆ. ಮನುಷ್ಯರಾಗಿ ಹುಟ್ಟಿದ ನಂತರ ನಾವೆಲ್ಲರೂ ನಮ್ಮ ಜೀವಿತ ಕಾಲದಲ್ಲಿ ಮಾನಸಿಕವಾಗಿ, ಭಾವನಾತ್ಮಕವಾಗಿ ಒಂದಲ್ಲ ಒಂದು ಬಗೆಯ ಹೊರೆಯನ್ನು ಹೊರುತ್ತಲೇ ಇರುತ್ತೇವೆ. ಯಾವುದೋ ಸಮಸ್ಯೆ, ಏನೋ ಆತಂಕ ನಮ್ಮೆಲ್ಲರನ್ನೂ ಕಾಡುತ್ತಲೇ ಇರುತ್ತವೆ. ಅಂಥವನ್ನು ನಾವು ಕೆಲಕಾಲ ಸಹಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಅದು ಅಸಾಧ್ಯವೆನ್ನಿಸಿದಾಗ, ಕೆಲ ಕ್ಷಣಗಳ ಮಟ್ಟಿಗಾದರೂ ಅವುಗಳನ್ನು ನಿವಾರಿಸಿಕೊಂಡು ಹಗುರಗೊಳ್ಳಬೇಕೆಂಬ ಹಂಬಲ ನಮ್ಮಲ್ಲಿ ತುಡಿಯತೊಡಗುತ್ತದೆ. ಅವರವರ ಪಾಲಿಗೆ ಬಂದ ಹೊರೆಯನ್ನು ಅವರವರೇ ಹೊರಬೇಕಾದುದು ಅನಿವಾರ್ಯವೆಂಬುದು ನಿಜ. ಏಸುಕ್ರಿಸ್ತ ತನ್ನ ಶಿಲುಬೆಯನ್ನು ತಾನೇ ಹೊರಬೇಕಾಯಿತಂತೆ, ಆದರೆ ಅಂಥ ಅನಿವಾರ್ಯತೆಯನ್ನು ತಾತ್ಕಾಲಿಕವಾಗಿಯಾದರೂ ಮೀರುವ ಪ್ರಯತ್ನವಂತೂ ಇದ್ದೇ ಇದೆ. ಈ ಕಾರಣಕ್ಕಾಗಿಯೇ ನಾವೆಲ್ಲರೂ ಬೇರೆ ಬೇರೆ ಹೊರೆಗಂಬಗಳ ಅಥವಾ ಆಲಂಬನಗಳ ಮೊರೆಹೋಗುತ್ತೇವೆ. ಕೆಲವರ ಪಾಲಿಗೆ ಸಂಗೀತ, ಸಾಹಿತ್ಯ, ಅಧ್ಯಾತ್ಮ, ಲಲಿತಕಲೆ, ಕ್ರೀಡೆ– ಇತ್ಯಾದಿಗಳು ಹೊರೆಗಲ್ಲುಗಳಾದರೆ, ಇನ್ನು ಕೆಲವರು ಜೂಜು, ಮಾದಕವಸ್ತು– ಇತ್ಯಾದಿಗಳನ್ನು ಆಲಂಬನಗಳನ್ನಾಗಿ ಮಾಡಿಕೊಂಡು, ತಮ್ಮ ತಮ್ಮ ಹೊರೆಗಳಿಂದ ತಾತ್ಕಾಲಿಕ ಬಿಡುಗಡೆ ಪಡೆಯುತ್ತಾರೆ. ಬಹು ಸಂಖ್ಯಾತರಿಗೆ ಬಂಧುಗಳು, ಸ್ನೇಹಿತರು, ಆಪ್ತರೆನ್ನಿಸಿಕೊಂಡವರು– ಒಟ್ಟಿನಲ್ಲಿ ಸ್ಪಂದನ ಶೀಲರಾದ ಸಹಜೀವಿಗಳೇ ಈ ಹೊರೆಗಲ್ಲುಗಳು. ಮಿತ್ರರೊಂದಿಗೋ, ಬಂಧುಗಳೊಂದಿಗೋ ನಮ್ಮ ಅಂತರಾಳದ ದುಗುಡ ದುಮ್ಮಾನಗಳನ್ನು ತೋಡಿಕೊಂಡು, ಕ್ಷಣಕಾಲವಾದರೂ ಸಮಾಧಾನ ಪಡೆಯಲು ನಾವು ಯತ್ನಿಸುತ್ತೇವೆ. ಹೀಗೆ ಮಾಡುವುದರಿಂದ ಕೆಲವೊಮ್ಮೆ ನಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕುವ ಸಾಧ್ಯತೆಯೂ ಇರುತ್ತದೆ. ಹಾಗಾಗದಿದ್ದರೂ ನಮ್ಮ ಒಳ ಗುರಿಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದರಿಂದ ಎದೆಯ ಭಾರ ತುಸು ಕಡಮೆಯಾಗುತ್ತದೆ; ಸಮಸ್ಯೆಗಳನ್ನು ಎದುರಿಸುವ ಚೈತನ್ಯ ಚಿಗುರುತ್ತದೆ.

ಇಂಥ ಆಲಂಬನಗಳ ಅಗತ್ಯವಿರುವುದರಿಂದಲೇ ಮನುಷ್ಯ ಸಮಾಜ ಜೀವಿಯಾಗಿರುವುದು, ಕುಟುಂಬ, ಸಮಾಜ ಮುಂತಾದ ಸಮುದಾಯಗಳು ಹುಟ್ಟಿಕೊಳ್ಳಲು ಮನುಷ್ಯರಲ್ಲಿರುವ ಪರಸ್ಪರಾವಲಂಬನ ಪ್ರವೃತ್ತಿಯೂ ಒಂದು ಮುಖ್ಯ ಕಾರಣ, ಮುಖ್ಯವಾದ ಮಾತೆಂದರೆ ಸಹಜೀವಿಯ ಸಮಸ್ಯೆಗಳನ್ನು ಸಹನೆಯಿಂದ, ಸಹಾನುಭೂತಿಯಿಂದ ಆಲಿಸಿ, ಪ್ರತಿಕ್ರಯಿಸುವ ಸಹೃದಯತೆ, ಸ್ಪಂದನಶೀಲತೆ ನಮ್ಮಲ್ಲಿದ್ದಾಗ ಮಾತ್ರ ನಾವು ಅವರ ಪಾಲಿನ ಹೊರೆಗಲ್ಲುಗಳಾಗುತ್ತೇವೆ. ಇಲ್ಲದಿದ್ದರೆ ಕೇವಲ 'ಕಲ್ಲು'ಗಳಾಗಿಯೇ ಉಳಿಯುತ್ತೇವೆ.

ಮನುಷ್ಯ ಕಂಡುಕೊಂಡ ಬಹುದೊಡ್ಡ 'ಹೊರೆಗಲ್ಲು' ಎಂದರೆ ದೇವರು, ಭಗವಂತನೆಂಬ ಮಹಾಸತ್ತ್ವವನ್ನು ಕಲ್ಪಿಸಿಕೊಂಡು ನಾವು 'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ' ಎಂದು ಶರಣು ಹೋಗಿ ಹಗುರಾಗುತ್ತೇವೆ. 'ದೇವ ನೀವು ದಿಟವೊ, ಸಟೆಯೋ? ಹೆರರು ತಿಳಿಯದಿರಿತಗಳನು, ಹುದುಗಿ ಇರುವ ಪಾಪಗಳನು, ಗುಟ್ಟನೆಲ್ಲವ– ಎದೆಯ ಹೊಗುತಲೆಲ್ಲ ತಿಳಿದು, ಸಂತ ವಿಡುವ ನೊಬ್ಬನುಂಟು...' ಎಂಬ ಪು.ತಿ.ನ. ಅವರ ಮಾತುಗಳು ಹೇಳುವುದೂ ಇದನ್ನೇ.

■ ವೈನತೇಯ

## ಮಾತೇ ಮುತ್ತು

★ ಕಳೆದು ಹೋದುದರ ನೆನಪೇ ಸುಖ. ದಡ್ಡರು ಬರಲಿರುವುದೇ ಸುಖ ಎಂದುಕೊಳ್ಳುತ್ತಾರೆ.

-ಫ್ರಾನ್ಸಿಸ್ ಥಾಂಪ್ಸನ್

★ ಇಲ್ಲೊಬ್ಬ ಅರಸಾಗಿ ರಾಜಗದ್ದುಗೆ ಹತ್ತಿದ್ದಾನೆ; ಅಲ್ಲೊಬ್ಬ ಬಿಕಾರಿಯಾಗಿ ಬೀದಿಗೆ ಬಿದ್ದಿದ್ದಾನೆ. ಆದರೆ ಇಬ್ಬರೂ ಒಂದು ದಿನ ಸಾಯುತ್ತಾರೆ.

-ಕಬೀರ

★ ಇವರು ಸತ್ತರೆಂಬುದು ಹುಸಿ, ನಿತ್ಯರೆಂಬುದು ಹುಸಿ, ಸತ್ತರೆಂಬುದು ದಿಟ ಗೊಗ್ಗೇಶ್ವರ.

-ಅಲ್ಲಮಪ್ರಭು

★ ಶರೀರ ಬಲಕ್ಕಿಂತ ಮನೋಬಲ, ನೈತಿಕ ಬಲವೇ ದೊಡ್ಡದು.

-ವೀರೇಂದ್ರ ಹೆಗ್ಗಡೆ

★ ಲೋಕದಲ್ಲಿ ಪ್ರತಿ ವಸ್ತುವಿನೊಂದಿಗೆ ಲಾಭ–ಹಾನಿ, ಸುಖ– ದುಃಖಗಳು ಬೇರ್ಪಡಿಸಲಾಗದಂತೆ ಸಂಬಂಧ ಹೊಂದಿವೆ. ಆದ್ದರಿಂದ ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ, ಪೂರ್ಣ ದುಃಖಿಯೂ ಅಲ್ಲ.

-ಗೌತಮ ಬುದ್ಧ

★ ದುಃಖಾಶ್ರುಗಳ ಬೆನ್ನ ಹಿಂದ ಆನಂದಾಶ್ರು, ಆನಂದಾಶ್ರುಗಳ ಬೆನ್ನ ಹಿಂದ ದುಃಖಾಶ್ರು.

-ದ.ರಾ.ಬೇಂದ್ರೆ

★ ಸುಖದ ಹಿಂಬದಿಯೇ ದುಃಖದ ಮಡುವು. ದುಃಖದ ಹಿಂಬದಿಯೇ ಸುಖದ ಠಾವು. ಎರಡರ ಸಹವಾಸದಲ್ಲಿ ಬೆಳೆದವನಾದ್ದರಿಂದ ಮನುಷ್ಯ ಸುಖದ ಆಸೆಯಲ್ಲಿ ಬದುಕಿರಲು ಹವಣಿಸುತ್ತಾನೆ. ಬರೀ ದುಃಖದಲ್ಲಿಯೇ ಅವನು ದಿನಗಳನ್ನು ಕಳೆದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ.

-ಆನಂದಕಂದ

★ ಸುಖವು ಬೀದಿಯ ನೆರಳ! ದುಃಖವು ದೂಡುವ ಬಿಸಿಲ! ಸುಖ– ದುಃಖ ನಮಗೆ ಸರಸವನ! ತಂಗೆಮ್ಮ ಒಂದು ಬಿಟ್ಟೊಂದು ದೊರಿಯಾವ.

-ಮಧುರಚೆನ್ನ

★ಸುಖವೂ ದುಃಖವೂ ಇಬ್ಬರೂ ಕಪಟಿಗಳೇ. ಇಬ್ಬರ ಕೈಗೆ ಸಿಕ್ಕಿದರೂ ಕೊನೆಗೆ ಆಗುವ ಗತಿ ಒಂದೇ.

-ಕೆ.ವಿ.ಅಯ್ಯರ್

★ ಸುಖಭರಿತವಾದ ಇಡಿಯ ಜೀವಮಾನ! ...ಜೀವಿಸಿರುವ ಯಾರೂ ಅದನ್ನು ಸಹಿಸಲಾರರು. ಅದು ಭೂಮಿಯ ಮೇಲಿನ ನರಕವಾದೀತು.

-ಜಾರ್ಜ್ ಬರ್ನಾರ್ಡ್ ಶಾ

★ ಸುಧಾರಣೆ ನೇರ ಹಾದಿಗಳನ್ನು ಹಾಕಿಕೊಡುತ್ತದೆ; ಆದರೆ ಅಡ್ಡ ಹಾದಿಗಳೇ ಪ್ರತಿಭೆಯ ದಾರಿಗಳು.

-ವಿಲಿಯಂ ಬ್ಲೇಕ್

★ ಸುಧಾರಣೆ ನಮಗೆ ಬೇಕೇ ಬೇಕು. ಆದರೆ ಭಯಪಡಿಸುವಷ್ಟು ಹೆಚ್ಚಾಗಿ ಬೇಡ.

-ಜೋಸೆಫ್ ಕೋನನ್

★ ಸುಧಾರಣೆ ಒಳಗಿನಿಂದ ಬರಬೇಕೆ ಹೊರತು, ಹೊರಗಿನಿಂದ ಅಲ್ಲ. ಒಳ್ಳೆಯದಕ್ಕೆ ಕಾನೂನು ಮಾಡಲು ಸಾಧ್ಯವಿಲ್ಲ.

-ಕಾರ್ಡಿನಲ್ ಗಿಬ್ಬನ್

★ ಸುಳ್ಳು ಹೇಳುವವನಿಗೆ ಒಳ್ಳೆಯ ಜ್ಞಾಪಕಶಕ್ತಿ ಇರಬೇಕು.

-ಕ್ವಿಂಟೀಲಿಯನ್